**ಕೊಪ್ಪಳದ ಸರಸ್ವತಿ ಎನ್ನುವ ಹೆಣ್ಣುಮಗಳು ಜುಲೇಖಾ ಹೆಸರಿನಲ್ಲಿ ವೃತ್ತಿರಂಗಭೂಮಿಯಲ್ಲಿ ಬಹು ಎತ್ತರಕ್ಕೆ ಬೆಳೆದು ನಿಂತ ಬಗೆ ಬೆರಗು ಹುಟ್ಟಿಸುವಂತಹದ್ದು. ಆರು ದಶಕಗಳ ಅವಧಿಯಲ್ಲಿ ಐನೂರಕ್ಕೂ ಹೆಚ್ಚು ನಾಟಕಗಳ 10 ಸಾವಿರಕ್ಕೂ ಹೆಚ್ಚಿನ ಪ್ರದರ್ಶನಗಳಲ್ಲಿ ಬಣ್ಣಹಚ್ಚಿದ ರಂಗಶ್ರೀಮಂತಿಕೆ ಅವರದು. ಎಪ್ಪತ್ತೇಳರ ವಯಸ್ಸಿನಲ್ಲೂ ಜುಲೇಖಾ ಅವರೊಳಗಿನ ಕಲಾವಿದೆಯ ಹಸಿವು ಸಮಾಧಾನಗೊಂಡಿಲ್ಲ.**





1981ರಲ್ಲಿ ಪ್ರದರ್ಶನವಾದ ಚಿಂದೋಡಿ ವೀರಣ್ಣ ಕಂಪನಿಯ 'ಮಂತ್ರಿ ಮಕ್ಕಳು' ನಾಟಕದಲ್ಲಿ ಶೇಖಚಾಂದ್ ಮತ್ತು ಜುಲೇಖಾ ಬೇಗಂ ದಂಪತಿ

ರಂಗಪರಂಪರೆಯ ಅಧ್ಯಾಯವೊಂದು ಕಣ್ಮುಂದೆ ಸುಳಿದುಹೋದಂತೆನ್ನಿಸಿತು.

1950ರ ದಶಕದಿಂದ ಆರಂಭಗೊಂಡು ಪ್ರಸ್ತುತ ವೃತ್ತಿ ರಂಗಭೂಮಿಯ ಸ್ಥಿತಿಗತಿಯನ್ನು ತುಂಬಾ ಹತ್ತಿರದಿಂದ ಕಂಡಿರುವ ಸರಸ್ವತಿ ಉರುಫ್ ಜುಲೇಖಾ ಬೇಗಂ ಅವರು, ಬಂದುದೆಲ್ಲವನ್ನೂ ಬಂದಂತೆಯೇ ಸ್ವೀಕರಿಸುತ್ತ ಜೀವನ ಸವೆಸಿದ್ದಾರೆ.

ಕೊಪ್ಪಳ ಜಿಲ್ಲೆಯ ಕುಕನೂರಿಲ್ಲಿ 1944ರಲ್ಲಿ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದ ಅವರಿಗೆ, ವೃತ್ತಿ ರಂಗಭೂಮಿ ಕ್ಷೇತ್ರದಲ್ಲಿ ಎತ್ತರಕ್ಕೆ ಬೆಳೆದ ಸಂದರ್ಭದಲ್ಲಿ ಸಿನಿಮಾ ನಟಿಯಾಗುವ ಅವಕಾಶವೂ ಒದಗಿ ಬಂದಿತ್ತು. ಆದರೆ, ಚಿತ್ರರಂಗದತ್ತ ಹೆಚ್ಚು ಆಸಕ್ತಿ ತೋರದ ಅವರು ಕೆಲವು ಸಿನಿಮಾಗಳಲ್ಲಿ ಮಾತ್ರ ನಟಿಸಿದರು; ವಿವಿಧ ನಾಟಕ ಕಂಪನಿಗಳಲ್ಲಿ ಅಭಿನಯಿಸುತ್ತ ರಂಗನಟಿಯಾಗಿಯೇ ಉಳಿದರು.

ಆರನೇ ವಯಸ್ಸಿನಲ್ಲೇ ನಾಟಕದತ್ತ ಆಕರ್ಷಿತರಾದ ಸರಸ್ವತಿ ಅವರು ನ್ಯಾಮತಿಯ 'ಶ್ರೀ ಮಹೇಶ ನಾಟ್ಯ ಸಂಘ'ದ 'ಸತ್ಯ ಹರಿಶ್ಚಂದ್ರ' ನಾಟಕದಲ್ಲಿ ಬಾಲನಟಿಯಾಗಿ ಅಭಿನಯಿಸಿದರು. ತಂದೆ ವೀರಪ್ಪ ಅವರಿಗೆ ಪುತ್ರಿ ನಾಟಕದಲ್ಲಿ ಅಭಿನಯಿಸುವುದು ಇಷ್ಟವಿರಲಿಲ್ಲ. ಆದರೆ, ತಾಯಿ ಶಿವಬಸಮ್ಮ ಪ್ರೋತ್ಸಾಹಿಸಿದರು.

ಮೂರನೇ ತರಗತಿಯವರೆಗೆ ಕಲಿತು ಶಾಲೆಯಿಂದ ದೂರವಾದ ಸರಸ್ವತಿ ನಂತರದ ದಿನಗಳಲ್ಲಿ ರಂಗಕರ್ಮಿ ಮಂದ್ರೆಕವಿ ಮತ್ತು ಹಾವೇರಿಯ ಜುಬೇದಾಬಾಯಿ ಅವರ ಮಾರ್ಗದರ್ಶನದಲ್ಲಿ ರಂಗಕ್ಷೇತ್ರದಲ್ಲಿ ಹೆಜ್ಜೆಯಿಟ್ಟರು. ಮನೆಗಿಂತ ಡ್ರಾಮಾ ಕಂಪನಿಗಳಲ್ಲಿ ಹೆಚ್ಚು ಇರುತ್ತಿದ್ದ ಅವರಿಗೆ ರಂಗಭೂಮಿಯೇ ಶಾಲೆ ಮತ್ತು ಜೀವನವಾಯಿತು.

ನಾಟಕ ಕಂಪನಿಗಳ ಪ್ರತಿಯೊಂದು ಸಂಗತಿಯನ್ನು ಕಲಿತ ಅವರು ಕೆಲವೇ ದಿನಗಳಲ್ಲಿ ರಂಗನಿರ್ದೇಶಕ, ಕಲಾವಿದರು, ತಂತ್ರಜ್ಞರು ಮುಂತಾದವರ ಮೆಚ್ಚುಗೆ ಗಳಿಸಿದರು. ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ಕಾಣಿಸಿಕೊಂಡರು. ನಟನೆಯ ಕಾರಣಕ್ಕೆ 'ಅಭಿನಯ ಶಾರದೆ' ಎಂಬ ಬಿರುದು ಅವರಿಗೆ ದೊರೆಯಿತು. ಅದೇ ಸಂದರ್ಭದಲ್ಲಿ ಚಿತ್ರನಿರ್ದೇಶಕ ಯೋಗಾನರಸಿಂಹ ಅವರ 'ಜೀವನಸಂಗ್ರಾಮ', 'ಅವಳ ಕಣ್ಣು' ಮತ್ತು 'ಮಹಾತಾಯಿ' ಚಲನಚಿತ್ರಗಳಲ್ಲಿ ನಟಿಸಿದರು.

ಸ್ವಂತ ನಾಟಕ ಕಂಪನಿ ಹೊಂದಿದ್ದ ಶೇಖ್ ಚಾಂದ್ ಅವರನ್ನು ಸರಸ್ವತಿ ಅವರು ತಮ್ಮ 23ನೇ ವಯಸ್ಸಿನಲ್ಲಿ ಪೋಷಕರ ವಿರೋಧದ ನಡುವೆ ವಿವಾಹವಾದರು. ಅವರಿಬ್ಬರ ಜೋಡಿ ಜನಪ್ರಿಯತೆ ಗಳಿಸಿತು. ಆದರೆ, ಕೆಲವೇ ವರ್ಷಗಳಲ್ಲಿ ಬೇರೆ ಬೇರೆ ಕಾರಣಗಳಿಗೆ ಕಂಪನಿ ಮುಚ್ಚಬೇಕಾದ್ದರಿಂದ ಇಬ್ಬರೂ ವಿವಿಧ ಕಂಪನಿಗಳಲ್ಲಿ ಅಭಿನಯಿಸತೊಡಗಿದರು.

ನ್ಯಾಮತಿಯ 'ಮಹೇಶ ನಾಟ್ಯ ಸಂಘ'ದಲ್ಲಿ 10 ವರ್ಷ, ಜಾಲಿಹಾಳದ 'ಪುಟ್ಟರಾಜ ನಾಟ್ಯ ಸಂಘ'ದಲ್ಲಿ 12 ವರ್ಷ, ಚಿತ್ತರಗಿಯ 'ಕುಮಾರ ವಿಜಯಾ ನಾಟ್ಯ ಸಂಘ'ದಲ್ಲಿ 3 ವರ್ಷ, ಚಿತ್ರದುರ್ಗದ 'ಕುಮಾರೇಶ್ವರ ನಾಟ್ಯ ಸಂಘ'ದಲ್ಲಿ 12 ವರ್ಷ ಸೇರಿದಂತೆ ಕಮತಗಿಯ 'ಹುಚ್ಚೇಶ್ವರ ನಾಟ್ಯ ಸಂಘ', ಕಮತಗಿಯ 'ಬಿ.ಆರ್.ಅರಿಶಿನಗೋಡಿ ನಾಟ್ಯ ಸಂಘ', ಗುಬ್ಬಿ ಚನ್ನಬಸಯ್ಯ ಕಂಪನಿ, ಏಣಗಿ ಬಾಳಪ್ಪ ಕಂಪನಿ, ಪಟ್ಟದಕಲ್ಲು ನಾಟಕ ಸಂಘಗಳ ರಂಗ ಪ್ರದರ್ಶನಗಳಲ್ಲಿ ಅಭಿನಯಿಸಿದರು.

1990ರಲ್ಲಿ ತೀವ್ರ ಆರ್ಥಿಕ ಮುಗ್ಗಟ್ಟಿನಿಂದ ಕೆಲವು ನಾಟಕ ಕಂಪನಿಗಳು ಮುಚ್ಚಿದರೆ, ಇನ್ನೂ ಕೆಲವು ಅಸ್ತಿತ್ವ ಕಳೆದುಕೊಳ್ಳುವ ಭೀತಿ ಎದುರಿಸಿದವು. ಶೇಖ್‌ಚಾಂದ್ ಮತ್ತು ಜುಲೇಖಾ ಅವರ ಬದುಕಿಗೂ ಸಂಕಷ್ಟ ಎದುರಾಯಿತು. ಇದರ ಮಧ್ಯೆ ನಾಟಕವೊಂದರಲ್ಲಿ ನಟಿಸುವ ಸಂದರ್ಭದಲ್ಲಿ ಬಿದ್ದು ಶೇಖ್‌ಚಾಂದ್ ಅವರ ಬೆನ್ನುಹುರಿಗೆ ಪೆಟ್ಟು ಬಿತ್ತು. ಒಂದು ವರ್ಷದವರೆಗೆ ಅವರು ಹಾಸಿಗೆಯಲ್ಲೇ ಉಳಿಯಬೇಕಾಯಿತು.

ಕಾಯಿಲೆಪೀಡಿತ ಪತಿ ಮತ್ತು ಮೂವರು ಮಕ್ಕಳ ಆರೈಕೆ, ಜೀವನ ನಿರ್ವಹಣೆಗಾಗಿ ಜುಲೇಖಾ ಅವರು ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿದರು, ಗ್ರಾಮಸ್ಥರು ಪ್ರದರ್ಶಿಸುವ ನಾಟಕಗಳಲ್ಲಿ ಅಭಿನಯಿಸಿದರು. ಅಲ್ಲಿಯೂ ಕೂಡ ಅವರು ಪ್ರತಿಭಾವಂತ ನಟಿ ಎಂದು ಎಲ್ಲರ ಮೆಚ್ಚುಗೆ ಗಳಿಸಿದರು. ಪೌರಾಣಿಕ ಕಥೆಗಳ ದ್ರೌಪದಿ, ಉತ್ತರೆ, ಕುಂತಿ, ಸೀತಾ ಪಾತ್ರಗಳಿಗೆ ಅವರನ್ನೇ ಆಯ್ಕೆ ಮಾಡಲಾಗುತಿತ್ತು.

ನಾಟಕಗಳ ಅಭಿನಯದಿಂದ ಬರುತ್ತಿದ್ದ ಆದಾಯದಿಂದಲೇ ಜುಲೇಖಾ ಬೇಗಂ ಅವರು ಕುಟುಂಬ ನಿರ್ವಹಿಸಿದರು. ಮೂವರು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದರು. ಆದರೆ, 1997ರಲ್ಲಿ ಅವರ ಮೂರನೇ ಮಗ ಸಿಕಂದರ್ ಬಾಷಾ ಅನಾರೋಗ್ಯದಿಂದ ಕೊನೆಯುಸಿರೆಳೆದರು. 2001ರಲ್ಲಿ ಅಪಘಾತದಲ್ಲಿ ಪತಿ ಶೇಖ್‌ಚಾಂದ್ ಸಾವನ್ನಪ್ಪಿದರು.

ಜುಲೇಖಾ ಬೇಗಂ ಅವರ ಪ್ರತಿಭೆಯನ್ನು ಹಲವಾರು ಸಂಘಸಂಸ್ಥೆಗಳು ಗುರುತಿಸಿವೆ ಮತ್ತು ಪ್ರೋತ್ಸಾಹಿಸಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಪ್ರದರ್ಶನ ಅಕಾಡೆಮಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ನಾಟಕ ಅಕಾಡೆಮಿ ಅವರನ್ನು ಗೌರವಿಸಿವೆ.

500ಕ್ಕೂ ಹೆಚ್ಚು ನಾಟಕಗಳ 10 ಸಾವಿರಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ಜುಲೇಖಾ ಬಣ್ಣ ಹಚ್ಚಿದ್ದಾರೆ. ಮೂರು ಚಲನಚಿತ್ರಗಳಲ್ಲಿ ಅಭಿನಯಿಸಿರುವ ಅವರು ರೇಡಿಯೊ ನಾಟಕಗಳಲ್ಲೂ ಪಾಲ್ಗೊಂಡಿದ್ದಾರೆ. ನಟಿಯೊಬ್ಬಳ ಬಣ್ಣದವೇಷ ಬೆರಳೆಣಿಕೆ ವರ್ಷಗಳಿಗಷ್ಟೇ ಸೀಮಿತವಾದ ಇಂದಿನ ಸಂದರ್ಭದಲ್ಲಿ, ಜುಲೇಖಾ ಅವರ ದಶಕಗಳ ಕಾಲದ ರಂಗಪಯಣ ಬಹುದೊಡ್ಡ ಸಾಧನೆಯೇ ಸರಿ.

ಪ್ರತಿಕ್ರಿಯಿಸಿ: feedback@sudha.co.in